



# ಕಲೆಯ ಹೂದೋಟ!

**ಗಿಡದ ತುಂಬೆಲ್ಲ ನಳನಳಿಸುವ ಹೂವುಗಳು ತಮ್ಮ ಆತ್ಯಾಕರ್ಷಕ ಬಣ್ಣಗಳಿಂದ ಮನಸೂರೆಗೊಳ್ಳುತ್ತವೆ. ಇದು ಬೆಂಗಳೂರಿನ ಕಲಾವಿದ ಶ್ರೀಕಂಠಯ್ಯ ಅವರ ಕೈಗಳಲ್ಲಿ ಅರಳಿದ ಹೂದೋಟ.**

■ ಸುರೇಖಾ ಹೆಗಡೆ

**ಅಲ್ಲಿ ಪಂಕ್ತಿ ಸೂರ್ಯಕಾಂತಿ;**
**ಇಲ್ಲಿ ಪನ್ನೇರಿಳೆ;**
**ಅಲ್ಲಿ ಹೊಂಗುಲಾಬಿ ಹಂತಿಲ**
**ಇಲ್ಲಿ ಚಿನ್ನ ವೂಮಳೆ**
**ಇಲ್ಲಿ ಕೆಂಪು; ಅಲ್ಲಿ ಹಳದಿ;**
**ಹಸುರು, ಪಚ್ಚೆ, ನೀಲಿ**
**ಹೊಸತೆ ಬಂತೊ ತಾಯ ಹರಕೆ**
**ಹೂವ ರೂಪ ತಾಳಿ!**

ಕುವೆಂಪು ಅವರ ಕವಿತೆಯ ಈ ಸಾಲುಗಳಿಗೆ ಸಾಕ್ಷಿಯಂತಿದೆ ಬೆಂಗಳೂರಿನಲ್ಲಿ ನೆಲೆಸಿರುವ ಕಲಾವಿದ ಕೆ.ಎಸ್.ಶ್ರೀಕಂಠಯ್ಯ ಅವರ ಕೈಯಲ್ಲಿ ಅರಳಿದ ಹೂದೋಟ. ಶ್ರೀಕಂಠಯ್ಯ ಅವರು ಸೃಷ್ಟಿಸಿರುವ ಈ ಹೂದೋಟದಲ್ಲಿ ಹೂವುಗಳ ಅಪಾರ ವೈವಿಧ್ಯವಿದೆ. ಗಿಡದ ತುಂಬೆಲ್ಲ ನಳನಳಿಸುವ ಹೂವುಗಳು ತಮ್ಮ ಅತ್ಯಾಕರ್ಷಕ ಬಣ್ಣಗಳಿಂದ ಮನಸೂರೆಗೊಳ್ಳುತ್ತವೆ. ಜೊತೆಗೆ ಒಳಾಂಗಣವನ್ನು ಅಂದಗೊಳಿಸುವ ಶೋಗಿಡಗಳೂ ಇಲ್ಲಿವೆ. ನೀರೆಯರೂ ನಾಚುವಷ್ಟು ಸೊಗಸಾಗಿ ನಿರ್ಮಾಣಗೊಂಡಿರುವ ಈ ಹೂದೋಟ ವಿಶೇಷವಾಗಿ ಕಾಣಲು ಮುಖ್ಯ ಕಾರಣ ಎಂದರೆ ಇದು ನೈಜವಾದ ಹೂಗಿಡಗಳಲ್ಲ. ಶ್ರೀಕಂಠಯ್ಯ ಅವರ ಮನಸಲ್ಲಿ ಅರಳಿದ ಹೂದೋಟ ಅವರ ಕಲಾ ಚಾಕಚಕ್ಯತೆಯಲ್ಲಿ ಮೂರ್ತರೂಪ ಪಡೆದುಕೊಂಡಿವೆ.

ಪುರಾತತ್ವ ಇಲಾಖೆಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಇವರು ದೇವಸ್ಥಾನ ರಿಪೇರಿ ಕೆಲಸದಲ್ಲಿ ನೈಪುಣ್ಯತೆ ಹೊಂದಿದ್ದರು. ಕಾರಣಾಂತರಗಳಿಂದ ವೃತ್ತಿ ಬದುಕಿನಿಂದ ಸ್ವಯಂ ನಿವೃತ್ತಿ ಪಡೆದರು. ಸಮಯವೇ ಇರದೆ ನಿರಂತರ ಕಾರ್ಯದಲ್ಲಿ ಬ್ಯುಸಿ ಆಗಿದ್ದ ಶ್ರೀಕಂಠಯ್ಯ ಅವರಿಗೆ ದಿನದ ಸಮಯ ಕಳೆಯುವುದೇ ಕಷ್ಟವಾಯಿತು. ಆಗ ಅವರ ಮನಸ್ಸಿಗೆ ಬಂದಿದ್ದು ಮನೆಯನ್ನು ಅಲಂಕರಿಸುವ ಮನಸ್ಸು. ತಾನು ನಿಷ್ಣಾತಿ ಹೊಂದಿದ ಕಲೆಯನ್ನೇ ಆಧಾರವಾಗಿಟ್ಟುಕೊಂಡು ಹೊಸತೇನನ್ನಾದರೂ ಮಾಡಬೇಕು ಎಂದು ಆಶಿಸಿ ಪೇಪರ್‌ನಿಂದ ವಿವಿಧ ಡಿಸೈನ್ ಮಾಡಿ ಮನೆಯನ್ನು ಅಲಂಕರಿಸಿದರು. ಅನಗತ್ಯ ವಸ್ತು ಏನೇ ಕಂಡರೂ ಅದಕ್ಕೆ ಹೊಸರೂಪ ಕೊಡಲು ಶ್ರೀಕಂಠಯ್ಯ ಮುಂದಾಗುತ್ತಿದ್ದರು.

ಇನ್ನಷ್ಟು ಹೊಸತನ್ನು ಮಾಡುವ ಹಂಬಲದಿಂದ ಇಂಪೋರ್ಟೆಡ್ ಕ್ರೇಪ್ ಪೇಪರ್‌ಗಳನ್ನು ಮನೆಗೆ ತಂದು ವಿವಿಧ ಹೂವುಗಳನ್ನು ಮಾಡಿದರು. ಅವು ಒಂದಕ್ಕಿಂತ ಒಂದು ಸುಂದರವಾಗಿ ಮೂಡಿಬಂದವು. ಸ್ವತಃ ಕಲಾವಿದರಾಗಿದ್ದರಿಂದ ಹೂವುಗಳಿಗೆ ನೈಜ ರೂಪ ನೀಡುವುದು ಅವರಿಗೆ ಕಷ್ಟವಾಗಲಿಲ್ಲ. ಪ್ರಕೃತಿಯಲ್ಲಿ ಕಾಣುವ ನೂರಾರು ಬಗೆಯ ಹೂವುಗಳನ್ನೇ ಸ್ಫೂರ್ತಿಯಾಗಿಸಿಕೊಂಡು ತಾವು ಹೂವುಗಳನ್ನು ಅರಳಿಸಿದರು. ಅದಕ್ಕೊಂದು ಗಿಡ, ಗಿಡವಿಡಲು ಪಾಟ್, ಆಕರ್ಷಕ ಸ್ಟೋನ್‌ಗಳನ್ನು ತಂದು ಅದನ್ನು ಒಪ್ಪವಾಗಿ ಜೋಡಿಸಿದರು. ಎಲೆ, ಮೊಗ್ಗು, ಹೂವುಗಳಿಂದ ನಳನಳಿಸುವ ಗಿಡಗಳನ್ನು ನೋಡಿದ ಯಾರೂ ಇದು ಕೃತಕ ಎಂದು ಒಪ್ಪಲಾರರು.

ಬಗೆಬಗೆಯ ಹೂವುಗಳಷ್ಟೇ ಅಲ್ಲ, ಮನೆಗಳನ್ನು ಅಲಂಕರಿಸುವ ಶೋಗಿಡಗಳನ್ನು

